
# ಶ್ರೀರಾಮಕೃಷ್ಣರ ಅನನ್ಯ ಆರಾಧಕ ಗಿರೀಶ ಚಂದ್ರ ಘೋಷ್

ಶ್ರೀರಾಮಕೃಷ್ಣ ಭಾವಧಾರೆಗೆ ಸಂಬಂಧಿಸಿದಂತೆ, ದಿವ್ಯತ್ರಯರ ಅನೇಕ ಜೀವನ ಚರಿತ್ರೆಗಳು ಹೊರಬಂದಿವೆ; ಈಗಲೂ ಪ್ರಕಟವಾಗುತ್ತಿವೆ. ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರನ್ನು ಕುರಿತು ಹತ್ತುಹಲವು ಗ್ರಂಥಗಳು ಕೂಡ ಹೊರಬಂದಿವೆ. ಆದರೆ ಅವರ ಗೃಹೀಭಕ್ತರನ್ನು ಕುರಿತ ಕೃತಿಗಳು ಹೆಚ್ಚಾಗಿ ರಚಿತವಾಗಿಲ್ಲ. ಈ ಕೊರತೆಯನ್ನು ತುಂಬುವಂತೆ ಇತ್ತೀಚೆಗೆ ಸ್ವಾಮಿ ಚೇತನಾನಂದಜಿ ಮಹಾರಾಜ್ ರಚಿಸಿದ ಒಂದು ಮಹತ್ವದ ಕೃತಿ ಹೊರಬಂದಿದೆ: ಅದು ಗಿರೀಶ್ ಚಂದ್ರ ಘೋಷ್ ಕುರಿತಾದ ಕೃತಿ. ಬಂಗಾಳದ ಪ್ರಸಿದ್ಧ ನಾಟಕಕಾರನೂ, ನಟನೂ, ಕವಿಯೂ ಆಗಿದ್ದವನು ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದು ಪರಮಭಕ್ತನಾದ ಒಂದು ಅಪರೂಪದ ಕಥೆ ಇಲ್ಲಿದೆ. ಆಂಗ್ಲ ಮೂಲದ ಈ ಕೃತಿಯನ್ನು ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಚಂದ್ರಶೇಖರಯ್ಯನವರು ಕನ್ನಡಕ್ಕೆ ಅನುವಾದಿಸಿದ್ದಾರೆ; ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಇದನ್ನು ಪ್ರಕಟಿಸಿದೆ. ಏಳುನೂರಕ್ಕೂ ಹೆಚ್ಚಿನ ಪುಟಗಳಿರುವ ಈ ಉದ್ಗ್ರಂಥವು ಒಬ್ಬ ಮಹಾನ್ ಸಾಧಕನ ಜೀವನದಲ್ಲಿ ಉಂಟಾದ ಮಹಾನ್ ಪರಿವರ್ತನೆಯನ್ನು ಹಂತಹಂತವಾಗಿ ವಿವರಿಸುತ್ತದೆ; ಅನೇಕ ಮಾಹಿತಿಗಳಿಂದ, ನೂರಾರು ಮಹತ್ವದ ಘಟನೆಗಳಿಂದ ಇಡಿಕಿರಿದಿದೆ. ಪರಮಪಾತಕಿ ಎಂದು ಜನರು ಕರೆಯಬಹುದಾದ ಹಲವು ಕೃತ್ಯಗಳನ್ನು ಎಸಗಿದ್ದೂ ಒಬ್ಬ ವ್ಯಕ್ತಿ ಅಪ್ರತಿಮ ಶ್ರದ್ಧೆ, ಭಕ್ತಿ , ವಿಶ್ವಾಸಗಳಿಂದ ಭಗವಂತನಿಗೆ ತನ್ನನ್ನು ತಾನು ಸಮರ್ಪಿಸಿಕೊಂಡ ಒಂದು ಅಸಾಧಾರಣ ಕಥೆ ಇಲ್ಲಿದೆ. ಅವತಾರ ಪುರುಷರ ದಿವ್ಯ ಸಂಸ್ಪರ್ಶದಿಂದ ಪತಿತರೂ, ಪಾತಕಿಗಳೂ, ಅಜ್ಞಾನಿಗಳೂ, ದೀನದಲಿತರೂ ಕೂಡ ಬ್ರಹ್ಮಜ್ಞಾನದ ಪರಮಪದವಿಯನ್ನು ಏರಬಹುದು ಎಂಬುದಕ್ಕೆ ಅತ್ಯುತ್ತಮ ನಿದರ್ಶನವೇ ಗಿರೀಶ ಚಂದ್ರನ ಜೀವನ. ಅವನ ಜೀವನದಲ್ಲಿ ಉಂಟಾದ ಮಹತ್ತರ ಪರಿವರ್ತನೆ ಅನೇಕ ಜನರಿಗೆ ದಾರಿ ತೋರಿಸುವಂತಿದೆ. ಆದ್ದರಿಂದಲೇ ಕೃತಿಗೆ ಸಮಂಜಸವಾದ ಶೀರ್ಷಿಕೆಯನ್ನು ನೀಡಲಾಗಿದೆ : **ಪರಿವರ್ತನೆ.**

ಈ ಕೃತಿಯಲ್ಲಿ ಒಟ್ಟು ೨೭ ಅಧ್ಯಾಯಗಳಿವೆ. ಪ್ರಾರಂಭಿಕ ಜೀವನ, ಅನಂತರ ಜೀವನ ನಿರ್ವಹಣೆ, ನಟನಾಗಿ ಹಾಗೂ ನಾಟಕಕಾರನಾಗಿ ಹೊಸ ಬದುಕಿನ ಆರಂಭ, ನಿರ್ದೇಶಕನಾಗಿ ಮುಂದಿನ ಜೀವನ, ನಾಸ್ತಿಕನಾಗಿದ್ದವನು ಹೇಗೆ ಆಸ್ತಿಕನಾದ, ಕ್ರಮೇಣ ಭಕ್ತಿಪೂರ್ಣವಾದ ನಾಟಕಗಳನ್ನು ರಚಿಸಿದ ವಿವರಗಳು, ಶ್ರೀರಾಮಕೃಷ್ಣರೊಡನೆ ಗಿರೀಶನಿಗುಂಟಾದ ಸಂಪರ್ಕ, ಅವರೊಡನೆ ಮಾಡಿದ ಸಂಭಾಷಣೆಗಳು, ಸ್ವಾಮಿ ವಿವೇಕಾನಂದರೊಡನೆ ಗಿರೀಶನಿಗಿದ್ದ ಸಂಬಂಧ, ಇತರ ಕಲಾವಿದರು ಹಾಗೂ ಗಿರೀಶ, ಶ್ರೀಮಾತೆಯ ಮೇಲೆ ಅವನಿಗಿದ್ದ ಭಕ್ತಿ — ಇವೇ ಮೊದಲಾದ ವಿಷಯಗಳು ಸುವಿಸ್ತಾರವಾಗಿ ಇಲ್ಲಿ ವಿವರಿಸಲ್ಪಟ್ಟಿದೆ.

'ಹೇಗೆ ದುಂಬಿಯು ಹಲವು ಬಗೆಯ ಹೂಗಳಿಂದ ಮಧುವನ್ನು ಸಂಗ್ರಹಿಸಿ ಜೇನುತುಪ್ಪವನ್ನು ತಯಾರು ಮಾಡುತ್ತದೋ ಹಾಗೆಯೇ ನಾನು ಗಿರೀಶನನ್ನು ಕುರಿತು ಪ್ರಕಟಗೊಂಡಿರುವ ಹಲವು ಮೂಲಗಳ ಬರಹಗಳಿಂದ ಮತ್ತು ಆತನವೇ ಕೃತಿಗಳಿಂದ ವಿಷಯ ಸಂಗ್ರಹ ಮಾಡಿ ಈ ಕೃತಿಯನ್ನು ಈ ರೂಪದಲ್ಲಿ ಹೊರತಂದಿದ್ದೇನೆ' ಎಂದು ಲೇಖಕರು ತಮ್ಮ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ; ಆಂಗ್ಲ ಭಾಷೆಯಲ್ಲಿ ಈ ಬಗೆಯ ಸಮಗ್ರ ಜೀವನಚರಿತ್ರೆ, ಲೇಖಕರಿಗೆ ತಿಳಿದಿರುವಂತೆ ಇದೇ ಮೊದಲನೆಯದು ಎಂದು ಇಲ್ಲಿ ಅವರೇ ತಿಳಿಸುತ್ತಾರೆ. ಅಪಾರ ಶ್ರಮದಿಂದ ರಚಿಸಿದ ಈ ಕೃತಿಯಲ್ಲಿ ಓದುಗರಿಗೆ ಅಗತ್ಯವಾದ ವಿವರಗಳು ವಿಪುಲವಾಗಿ ಲಭಿಸುತ್ತವೆ. ಪ್ರಸಿದ್ಧ ಆಂಗ್ಲ ಲೇಖಕ ಕ್ರಿಸ್ಟೋಫರ್ ಇಷರ್‌ವುಡ್ ಅವರ ಮುನ್ನುಡಿ, ಅನೇಕ ಚಿತ್ರಗಳು, ಆಧಾರ ಗ್ರಂಥಗಳ ಪಟ್ಟಿ (ಕೃತಿಯ ಕೊನೆಯಲ್ಲಿದೆ) — ಇವುಗಳು ಈ ಗ್ರಂಥಕ್ಕೆ ಒಂದು ಬಗೆಯ ಘನತೆಯನ್ನು ತಂದಿವೆ. ಕನ್ನಡ ಓದುಗರು ಈ ಕೃತಿಯ ಮೂಲಕ ಒಬ್ಬ ಮಹಾನ್ ಭಕ್ತನ ಮಹಾಪರಿವರ್ತನೆಯ ಕಥೆಯನ್ನು ಅಗತ್ಯವಾಗಿ ತಿಳಿಯಬಹುದು.




*ಕೃತಿ :* **ಪರಿವರ್ತನೆ**
*ಲೇಖಕರು :* **ಸ್ವಾಮಿ ಚೇತನಾನಂದ**
*ಪ್ರಕಾಶಕರು :* **ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು - ೫೭೦೦೨೦**
*ಪುಟಗಳು :* **715**
*ಬೆಲೆ :* **220 ರೂ.**